ಸಾಕ್ಷಿಯು ಕ್ರಮವಾಗಿ ಪ್ರಮಾಣಿಕರಿಸಿದ ದಿಃ  ೭-೧೧-೧೬
ಪಾಟಿ ಸವಾಲುಃ ಶ್ರೀ ಪಿ ಕೆ ಜಿ ವಕೀಲರಿಂದ

ನಾನು ಸರಕಾರಿ ಸರ್ವೆಯರ್ ಅಗಿರುತ್ತೆನೆ . ನಾನು ಶನಿವಾರಸಂತೆ ಸಿಟಿ ಸರ್ವೆಯನ್ನು ಮಾಡಿರುತ್ತೇನೆ . ನನ್ನ ಇಬ್ಬರು ಸಿಬ್ಬಂದಿಗಳಾದ ಮಹದೇವೆಗೌಡ  ಮತ್ತು ನರಸೇಗೌಡ ರವರೊಂದಿಗೆ ನಾವು ಮೂರು ಜನರು ಒಟ್ಟಿಗೆ ಸೇರಿ ಸರ್ವೆ ಮಾಡುತ್ತಿದ್ದೆವು. ನಾವು ಒಂದು ನಿವೇಶನ ಸರ್ವೆ ಮಾಡುವಾಗ ಮೂರು ಜನ ಒಟ್ಟಿಗೆ ಸೇರಿ ಮಾಡುತ್ತೇವೆ. ಸರ್ವೆ ಮಾಡಲು ನಾವು ಟೋಟಲ್ ಸ್ಟೇಷನ್ ಎಂಬ ಎಲೆಕ್ಟ್ರಾನಿಕ್ ಉಪಕರಣವನ್ನು ಉಪಯೋಗಿಸಿ ಸರ್ವೆ ಮಾಡುತ್ತೇವೆ. ಸದರಿ ಉಪಕರಣವನ್ನು ನಿವೇಶನದ ಎಲ್ಲಾ ಬೌಂಡರಿಗಳಲ್ಲಿಟ್ಟು ಗುರುತು ಮಾಡುತ್ತೇವೆ. ನಾವು ಉಪಕರಣದಲ್ಲಿ ಮಾಡುವುದಕ್ಕೂ ಹಾಗೂ ಚೈನ್ ಎಳೆದು ಮಾಡುವುದಕ್ಕೂ ಸ್ವಲ್ಪ ವ್ಯತ್ಯಾಸ ಬರುತ್ತದೆ. ನಾವು ಸರ್ವೆ ಮಾಡುವಾಗ ಜಾಗದ ಉದ್ದ , ಅಗಲ ಸದರಿ ಉಪಕರಣದಲ್ಲಿ ನಮೂದಾಗುತ್ತದೆ. ವಾದಿ ಜಾಗವನ್ನು ನಾವು ಸರ್ವೆ ಮಾಡುವಾಗ ವಾದಿಯು ಹಾಜರಿರುತ್ತಾರೆ . ನಾವು ಜಾಗವನ್ನು ಸರ್ವೆ ಮಾಡಲು ವೈಯಕ್ತಿಕವಾಗಿ ನೋಟಿಸ್ ಕೊಟ್ಟಿರುತ್ತೇವೆ ಮತ್ತು ಈಡಿ ಗ್ರಾಮಕ್ಕೆ ಟಾಂ ಟಾಂ ಹೊಡೆಸಿ ಗ್ರಾಮಸ್ಥರಿಗೆ ಬಿತ್ತಿ ಪತ್ರ ಕೊಟ್ಟಿರುತ್ತೇವೆ . ನಾವು ಸದರಿ ಮಹಜರ್ ಮಾಡುವಾಗ ಸದರಿ ಜಾಗದ ಮಾಲೀಕರ ಸಹಿಯನ್ನು ಮಹಜರಿಗೆ ತೆಗೆದುಕೊಳ್ಳುತ್ತೇವೆ . ಅದೇ ರೀತಿ ನಾವು ವಾದಿಯ ಜಾಗವನ್ನು ಕೂಡ ಸರ್ವೆ ಮಾಡಿ , ಮಹಜರ್ ಮಾಡಿ ಅವರ ಸಹಿಯನ್ನು ತೆಗೆದುಕೊಂಡಿರುತ್ತೇವೆ . ಸದರಿ ವಾದಿಯ ಸಹಿ ಇರುವ ಮಹಜರ್‌ನ್ನು ನಾನು ಈ ನ್ಯಾಯಾಲಯದಲ್ಲಿ ಈ ಕೇಸಿನಲ್ಲಿ ನೋಡಿರುವುದಿಲ್ಲ.

ನಿಪಿ ೨೨ , ೨೩ , ೨೪ ವಾದಿಗೆ ಸಂಬಂಧ ಪಟ್ಟಿರುತ್ತದೆ . ಅದರಲ್ಲಿ ಎಷ್ಟು ವಿಸ್ತೀರ್ಣ ಇದೆ ಎಂದು ಬರೆದಿರುತ್ತಾರೆ . ಅದರಲ್ಲಿ ೧,೦೩೬.೯೧೬ Square ಮೀಟರ್ ಜಾಗ ವಾದಿಯ ಸ್ವಾಧೀನದಲ್ಲಿತ್ತು, ಒಂದು ಸೆಂಟ್ ಎಂದರೆ ೪೦ Square ಮೀಟರ್ ಜಾಗ . ಅಂದರೆ ಸದರಿ ೧,೦೩೬.೯೧೬ Square ಮೀಟರ್ ಜಾಗದ ವಿಸ್ತೀರ್ಣವನ್ನು ಸೆಂಟ್‌ಗೆ ಪರಿವರ್ತನೆ ಮಾಡಿದಾಗ ಸುಮಾರು  ೨೬ ಸೆಂಟ್ ಬರುತ್ತದೆ . ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದಂತೆ ವಾದಿಯನ್ನು ಕೂಡ ವಿಚಾರಣಾಧಿಕಾರಿಗಳಿಂದ ವಿಚಾರಣೆ ಮಾಡಲಾಗಿದೆ . ವಾದಿಯ ಜಮೀನಿನಲ್ಲಿ ಯಾವುದೇ ರೀತಿಯ ಎನ್‌ಕ್ರೋಚ್‌ಮೆಂಟ್ ಇಲ್ಲ.

ನಾವು ಸದರಿ ಹೇಳಿದ ನಿಪಿ ೨೨ ರಿಂದ ೨೪ ರಲ್ಲಿ ವಾದಿಯ ದಾಖಲೆಯಲ್ಲಿ ಕಡಿಮೆ ವಿಸ್ತೀರ್ಣದ ಜಾಗವನ್ನು ನಮೂದು ಮಾಡಿಲ್ಲ. ಸದರಿ ವಾದಿಯವರ ಸ್ವಾಧೀನದಲ್ಲಿ ರೆವಿನ್ಯೂ ದಾಖಲೆಯಷ್ಟೇ ಜಾಗ ಇದ್ದುದರಿಂದ ವಾದಿ ಕಡಿಮೆ ಜಾಗದಲ್ಲಿ ಸ್ವಾಧೀನದಲ್ಲಿದ್ದಾರೆ ಎಂದರೆ ಸರಿಯಲ್ಲ. ನಾವು ವಾದಿಯ ಜಾಗವನ್ನು ಸರ್ವೆ ಮಾಡಿದಾಗ ಮಹಜರ್‌ನಲ್ಲಿ ಅನುಭವ ಎಷ್ಟು ಇರುತ್ತದೆ ಅಷ್ಟೆ ನಮೂದು ಮಾಡುತ್ತೇವೆ . ವಿಸ್ತೀರ್ಣ ಹೆಚ್ಚು ಕಡಿಮೆ ಇದ್ದರೆ ನಮೂದು ಮಾಡುವುದಿಲ್ಲ. ಸದರಿ ನಿಪಿ ೨೨ ರಿಂದ ೨೪ ರ ದಾಖಲೆಯನ್ನು ನೋಡಿದರೆ ಹೆಚ್ಚುವರಿ ಜಾಗ ಯಾವ ಭಾಗದಲ್ಲಿದೆ ಎಂದು ಹೇಳಲು ಬರುವುದಿಲ್ಲ.

ನಿಪಿ ೨೫ , ೨೮ , ೩೧ ರ ದಾಖಲೆಗಳಲ್ಲಿ ಹೆಚ್ಚುವರಿ ಜಾಗವಿದೆ ಎಂದು ನಮೂದಾಗಿರುತ್ತದೆ . ಅ ಹೆಚ್ಚುವರಿ ಜಾಗ ಯಾವ ಸರ್ವೆ ನಂಬರ್‌ಗೆ ಸೇರಿದ್ದು ಎಂದರೆ ಸಾಕ್ಷಿ ಅದು ಈ ದಾಖಲೆಯಲ್ಲಿ ನಮೂದಾಗಿರುವುದಿಲ್ಲ ಅದು ಇಲಾಖಾ ವಿಚಾರಣಾ ವಹಿಯಲ್ಲಿ ನಮೂದಾಗಿರುತ್ತದೆ ಎನ್ನುವರು . ಈ ಸದರಿ ಮೂರು ದಾಖಲೆಯನ್ನು ನೋಡಿ ಹೆಚ್ಚುವರಿ ಜಾಗ ಖಾಸಾಗಿ ಸೊತ್ತೊ ಅಥವಾ ಪೈಸಾರಿ ಸೊತ್ತೊ ಎಂದು ಹೇಳಲು ಬರುವುದಿಲ್ಲ. ನಾನು ನಿಪಿ ೨೫ , ೨೮ , ೩೧ ರಲ್ಲಿ ಬರೆದಿರುವ ಹೆಚ್ಚುವರಿ ಜಾಗವು ಯಾರಿಗೆ ಸಂಬಂಧ ಪಟ್ಟಿದ್ದು ಎಂದು ಬದಲಾಗಿ ಸರಕಾರಕ್ಕೆ ಸೇರಿದ್ದು ಎಂದು ಬರೆದಿರುತ್ತೇನೆ.

ನಾವು ಆರ್ ಟಿ ಸಿ ಯಲ್ಲಿ ಬರೆದಿರುವ ವಿಸ್ತೀರ್ಣವನ್ನು ಚೈನ್ ಎಳೆದು ಅಳತೆ ಮಾಡಿ ಬರೆದಿರುತ್ತೇವೆ . ಅಂದರೆ ಚೈನ್ ಸರ್ವೆ ಆಧಾರದ ಮೇಲೆ ನಮೂದಿಸಿರುವ ವಿಸ್ತೀರ್ಣ. ನಾವು ಸರ್ವೆ ಮಾಡುವಾಗ ಎಲ್ಲಾ ಅಗಲ ಮತ್ತು ಉದ್ದವನ್ನು ಅಳತೆ ಮಾಡುವಾಗ ಸದರಿ ಹೇಳಿದ ಉಪಕರಣವನ್ನು ಉಪಯೋಗಿಸುತ್ತೇವೆ . ಯಾವುದೇ ಕಾರಣಕ್ಕೂ ಟೇಪ್‌ನ್ನು ಉಪಯೋಗಿಸುವುದಿಲ್ಲ.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಗಿದೆ).

ಓ ಹೇ ಕೇ ಸರಿ ಇದೆ

Sd/-

ಪ್ರ ದ ನ್ಯಾ ದಂ ಸೋ ಪೇಟೆ